# ನಡೆ–ನುಡಿಯ ಆದರ್ಶ: ನ್ಯಾಯಮೂರ್ತಿ ಡಾ. ಶಿವರಾಜ ವಿ. ಪಾಟೀಲ

**ದೊಡ್ಡಬಸಪ್ಪ ಸಿದ್ದನಗೌಡ ಹುಡೇದಗಡ್ಡಿ***

**DOI: https://doi.org/10.5281/zenodo.21438258**

**ABSTRACT**

ಪ್ರಸ್ತುತ ಸಂಶೋಧನಾ ಲೇಖನವು ನ್ಯಾಯಮೂರ್ತಿ ಡಾ. ಶಿವರಾಜ ವಿ. ಪಾಟೀಲ ಅವರ ಜೀವನ, ಚಿಂತನೆ ಮತ್ತು "ನಡೆ–ನುಡಿ" ಆಧಾರಿತ ಮೌಲ್ಯತತ್ವಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸುತ್ತದೆ. ಅಧ್ಯಯನವು ಅವರ ನ್ಯಾಯತತ್ತ್ವದಲ್ಲಿ ಮಾನವ ಘನತೆ, ನೈತಿಕ ಮೌಲ್ಯಗಳು ಹಾಗೂ ಸಾಮಾಜಿಕ ನ್ಯಾಯದ ಅಂಶಗಳು ಹೇಗೆ ಸಮನ್ವಯಗೊಂಡಿವೆ ಎಂಬುದನ್ನು ವಿಶದಪಡಿಸುತ್ತದೆ. ಕೇವಲ ಕಾನೂನು ಪ್ರಕ್ರಿಯೆಗಳ ನಿರ್ವಹಣೆಗೆ ಸೀಮಿತವಾಗದೇ, ಮಾನವೀಯತೆ ಮತ್ತು ನ್ಯಾಯಸಮ್ಮತ ದೃಷ್ಟಿಕೋನವನ್ನು ಒಟ್ಟುಗೂಡಿಸಿದ ಅವರ ದಾರ್ಶನಿಕ ನಿಲುವು ಈ ಲೇಖನದ ಮುಖ್ಯ ಆವಿಷ್ಕಾರವಾಗಿದೆ. ಜೊತೆಗೆ, ಶರಣ ಸಂಸ್ಕೃತಿಯ ಪ್ರಭಾವದಲ್ಲಿ ರೂಪುಗೊಂಡ ಅವರ ವ್ಯಕ್ತಿತ್ವವು ಮೌಲ್ಯಾಧಾರಿತ ನಾಯಕತ್ವದ ಮಾದರಿಯಾಗಿ ಅಭಿವ್ಯಕ್ತವಾಗಿರುವುದನ್ನು ಲೇಖನವು ಸೂಚಿಸುತ್ತದೆ. ಈ ಅಧ್ಯಯನವು ನ್ಯಾಯಮೂರ್ತಿ ಡಾ. ಶಿವರಾಜ ವಿ. ಪಾಟೀಲ ಅವರ ಜೀವನ ಮತ್ತು ಕಾರ್ಯಗಳನ್ನು ಸಮಕಾಲೀನ ಸಮಾಜದ ಸಾಂಸ್ಕೃತಿಕ ಹಾಗೂ ನೈತಿಕ ಪ್ರಸ್ತುತತೆಯ ಪರಿಪ್ರೇಕ್ಷ್ಯದಲ್ಲಿ ಅರ್ಥೈಸಿ, ಭವಿಷ್ಯದ ಪೀಳಿಗೆಗೆ ಮಾರ್ಗದರ್ಶನ ನೀಡುವ ಆದರ್ಶ ರೂಪವಾಗಿ ಸ್ಥಾಪಿಸುತ್ತದೆ.

**KEYWORDS:** ನಡೆ–ನುಡಿ ತತ್ತ್ವ , ನ್ಯಾಯತತ್ತ್ವಶಾಸ್ತ್ರ, ಮಾನವ ಘನತೆ, ಸಾಮಾಜಿಕ ನ್ಯಾಯ, ನೈತಿಕ ಮೌಲ್ಯಗಳು, ಮೌಲ್ಯಾಧಾರಿತ ನಾಯಕತ್ವ.

* **ಪ್ರೊ. ದೊಡ್ಡಬಸಪ್ಪ ಸಿದ್ದನಗೌಡ ಹುಡೇದಗಡ್ಡಿ**, ಸಂಶೋಧನಾ ವಿದ್ಯಾರ್ಥಿ, ಶರಣಬಸವ ವಿಶ್ವವಿದ್ಯಾಲಯ, ಕಲಬುರಗಿ.

**ಪ್ರಸ್ತಾವನೆ:**

ನ್ಯಾಯಮೂರ್ತಿ ನಾಡೋಜ ಡಾ. ಶಿವರಾಜ ವಿ. ಪಾಟೀಲ ಅವರು ಭಾರತದ ನ್ಯಾಯಾಂಗದ ಇತಿಹಾಸದಲ್ಲಿ ಪ್ರಾಮಾಣಿಕತೆಯ ಮತ್ತೊಂದು ಹೆಸರು. ಅವರು ಕೇವಲ ನ್ಯಾಯ ವಿದ್ವಾಂಸರಲ್ಲ, ಬದಲಾಗಿ 12ನೇ ಶತಮಾನದ ಅನುಭವ ಮಂಟಪದ ಶರಣರ ಪ್ರತಿರೂಪವಾಗಿ 21ನೇ ಶತಮಾನದಲ್ಲಿ ಕಾಣಸಿಗುವ ಅಪರೂಪದ ವ್ಯಕ್ತಿತ್ವ. 'ನಡೆ ಮತ್ತು ನುಡಿ' ಒಂದಾಗಿಸಿಕೊಂಡು ಬದುಕುತ್ತಿರುವ ಅವರ ಜೀವನವು ಒಂದು ಸಾರ್ಥಕ ಪಯಣವಾಗಿದೆ. ಭಾರತೀಯ ನ್ಯಾಯಾಂಗ ಕ್ಷೇತ್ರದಲ್ಲಿ ಗಣನೀಯ ಸಾಧನೆಗೈದ ಮಹನೀಯರಲ್ಲಿ ನ್ಯಾಯಮೂರ್ತಿ ನಾಡೋಜ ಡಾ. ಶಿವರಾಜ ವಿ. ಪಾಟೀಲ ಅವರದು ಪ್ರಮುಖ ವ್ಯಕ್ತಿತ್ವ. ಅವರು ಕೇವಲ ನ್ಯಾಯಮೂರ್ತಿಯ ಸ್ಥಾನಮಾನವನ್ನು ಅಲಂಕರಿಸಿದವರಲ್ಲ; ಚಿಂತಕ, ಸಾಹಿತ್ಯಸಾಧಕ, ಸಂಘಟಕ, ಸಮಾಜಮುಖಿ ಕಾರ್ಯಕರ್ತ ಹಾಗೂ ಮೌಲ್ಯಾಧಾರಿತ ಜೀವನದ ಪ್ರತಿನಿಧಿ. ಗ್ರಾಮೀಣ ಹಿನ್ನೆಲೆಯಿಂದ ಆರಂಭವಾದ ಅವರ ಜೀವನಯಾನವು ಶ್ರದ್ಧೆ, ಪರಿಶ್ರಮ, ನೈತಿಕತೆ ಮತ್ತು ಆತ್ಮವಿಶ್ವಾಸದ ಶಕ್ತಿಯಿಂದ ಉನ್ನತ ನ್ಯಾಯಾಂಗ ಸ್ಥಾನದವರೆಗೆ ಏರಿದ ಸಾಧನೆಯ ಪಥವಾಗಿದೆ. ನ್ಯಾಯಾಂಗ ಸೇವೆಯ ಗಂಭೀರತೆ, ಬಸವತತ್ತ್ವದ ಅನುಷ್ಠಾನ, ಶರಣ ಸಂಸ್ಕೃತಿಯ ಅಳವಡಿಕೆ, ಹಾಗೂ ಸಮಾಜಮುಖಿ ಕಾರ್ಯಚಟುವಟಿಕೆಗಳ ಸಮನ್ವಯದಲ್ಲಿ ಅವರ ವ್ಯಕ್ತಿತ್ವ ರೂಪುಗೊಂಡಿದೆ.

**ನ್ಯಾಯಮೂರ್ತಿ ಶಿವರಾಜ ಪಾಟೀಲರ ವ್ಯಕ್ತಿತ್ವ:**

ನ್ಯಾಯಮೂರ್ತಿ ನಾಡೋಜ ಡಾ. ಶಿವರಾಜ ವಿ. ಪಾಟೀಲ ಅವರ ವ್ಯಕ್ತಿತ್ವವು ಬಹುಮುಖ ಗುಣಗಳ ಸಮನ್ವಯವಾಗಿದ್ದು, ಅದು ನೈತಿಕತೆ, ಸರಳತೆ, ಶಿಸ್ತು ಮತ್ತು ಮಾನವೀಯತೆಯ ಮೌಲ್ಯಗಳಿಂದ ರೂಪುಗೊಂಡಿದೆ. ಅವರು ಕೇವಲ ನ್ಯಾಯಾಂಗ ಕ್ಷೇತ್ರದಲ್ಲಿ ಸಾಧನೆ ಮಾಡಿದ ವ್ಯಕ್ತಿಯಲ್ಲ, ಜೀವನದ ಪ್ರತಿಯೊಂದು ಹಂತದಲ್ಲಿಯೂ ಆದರ್ಶಪ್ರಾಯ ವ್ಯಕ್ತಿತ್ವವನ್ನು ತೋರಿದ ಮಹನೀಯರಾಗಿದ್ದಾರೆ. ಅವರ ವ್ಯಕ್ತಿತ್ವದ ಪ್ರಮುಖ ಲಕ್ಷಣಗಳಲ್ಲಿ ಸರಳತೆ ಪ್ರಮುಖವಾದುದು. ಉನ್ನತ ಹುದ್ದೆಗಳನ್ನು ಅಲಂಕರಿಸಿದರೂ ಅವರು ಯಾವಾಗಲೂ ವಿನಯಶೀಲರಾಗಿಯೇ ಉಳಿದಿದ್ದರು. ಸಾಮಾಜಿಕ ಸ್ಥಾನಮಾನ ಅಥವಾ ಅಧಿಕಾರವು ಅವರ ನಡೆ-ನುಡಿಯಲ್ಲಿ ಯಾವುದೇ ಅಹಂಕಾರವನ್ನು ಉಂಟುಮಾಡಲಿಲ್ಲ. ಅವರು ಎಲ್ಲ ವರ್ಗದ ಜನರೊಂದಿಗೆ ಸಮಾನವಾಗಿ ನಡೆದುಕೊಂಡು, ತಮ್ಮ ಜೀವನದಲ್ಲಿ ಸಮಾನತೆ ಎಂಬ ಮೌಲ್ಯವನ್ನು ಅಳವಡಿಸಿಕೊಂಡಿದ್ದರು. ಈ ಗುಣವು ಅವರನ್ನು ಜನಸಾಮಾನ್ಯರ ಹೃದಯಕ್ಕೆ ಹತ್ತಿರ ಮಾಡಿತು.

**"ಭಕ್ತಿ ಸುಭಾಷೆಯ ನುಡಿಯ ನುಡಿವೆ, ನುಡಿದಂತೆ ನಡೆವೆ,**
**ನಡೆಯೊಳಗೆ ನುಡಿಯ ಪೂರೈಸುವೆ.**
**ಮೇಲೆ ತೂಗುವ ತ್ರಾಸು ಕಟ್ಟಳೆ ನಿಮ್ಮಕೈಯಲ್ಲಿ.**
**ಒಂದು ಜವೆ ಕೊರತೆಯಾದಡೆ**
**ಎನ್ನನದ್ದಿ ನೀನೆದ್ದು ಹೋಗು, ಕೂಡಲಸಂಗಮದೇವಾ".**

ಎನ್ನುವ ಶರಣರ ವಾಣಿಯಂತೆ, ನ್ಯಾಯಮೂರ್ತಿ ಪಾಟೀಲರ ವ್ಯಕ್ತಿತ್ವದಲ್ಲಿ ನೈತಿಕತೆ ಮತ್ತು ಪ್ರಾಮಾಣಿಕತೆ ಅತ್ಯಂತ ಪ್ರಮುಖ ಸ್ಥಾನವನ್ನು ಹೊಂದಿವೆ. ಅವರು ಸದಾ ಸತ್ಯ ಮತ್ತು ನ್ಯಾಯದ ಪರ ನಿಂತು, ಯಾವುದೇ ಪರಿಸ್ಥಿತಿಯಲ್ಲಿಯೂ ತಮ್ಮ ಮೌಲ್ಯಗಳನ್ನು ಬಿಡಲಿಲ್ಲ. ಅವರು ಜೀವನದಲ್ಲಿ ಅನುಸರಿಸಿದ "ನಡೆ-ನುಡಿ ಒಂದಾಗಿರಬೇಕು" ಎಂಬ ತತ್ವವು ಅವರ ವ್ಯಕ್ತಿತ್ವದ ಕೇಂದ್ರೀಯ ಅಂಶವಾಗಿದೆ. ನಡೆ-ನುಡಿ ಒಂದಾಗಿರಬೇಕು ಎಂಬ ತತ್ವವನ್ನು ಅವರು

ಕೇವಲ ಹೇಳಿಕೆಯಲ್ಲಿ ಮಾತ್ರವಲ್ಲದೆ, ತಮ್ಮ ಜೀವನದಲ್ಲಿ ಅನುಸರಿಸಿದರು. ಅವರ ಮಾತು ಮತ್ತು ಕಾರ್ಯಗಳ ನಡುವಿನ ಏಕತೆಯು ಅವರ ವ್ಯಕ್ತಿತ್ವದ ಮಹತ್ವವನ್ನು ಹೆಚ್ಚಿಸಿದೆ.

ತಾಳ್ಮೆ ಮತ್ತು ಶಾಂತ ಸ್ವಭಾವವು ಅವರ ಮತ್ತೊಂದು ಪ್ರಮುಖ ಗುಣವಾಗಿದೆ. ಅವರು ಯಾವುದೇ ಪರಿಸ್ಥಿತಿಯನ್ನು ಆತುರವಿಲ್ಲದೆ, ಸಮತೋಲನದಿಂದ ಮತ್ತು ವಿವೇಕದಿಂದ ನಿರ್ವಹಿಸುತ್ತಿದ್ದರು. ಸಂಕೀರ್ಣ ಸಮಸ್ಯೆಗಳಲ್ಲಿಯೂ ಅವರು ತಾಳ್ಮೆಯಿಂದ ವಿಚಾರಿಸಿ ನ್ಯಾಯಸಮ್ಮತ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದರು. ಈ ಗುಣವು ಅವರನ್ನು ಒಬ್ಬ ಉತ್ತಮ ನ್ಯಾಯಮೂರ್ತಿಯನ್ನಾಗಿ ಮಾಡಿತು.

ಅವರ ವ್ಯಕ್ತಿತ್ವದಲ್ಲಿ ಶಿಸ್ತಿನ ಮಹತ್ವವೂ ವಿಶೇಷವಾಗಿ ಗಮನಾರ್ಹವಾಗಿದೆ. ಸಮಯದ ಮೌಲ್ಯವನ್ನು ಅರಿತವರು. ಒಂದು ಕ್ಷಣವೂ ವ್ಯರ್ಥ ಮಾಡದೇ, ತಮ್ಮ ಜೀವನವನ್ನು ಗುರಿಯತ್ತ ಕೊಂಡೊಯ್ಯುವಲ್ಲಿ ಅವರು ಸದಾ ಪ್ರಯತ್ನಿಸುತ್ತಿದ್ದರು. ಈ ಶಿಸ್ತು ಮತ್ತು ಪರಿಶ್ರಮವೇ ಅವರ ಯಶಸ್ಸಿನ ಮೂಲ ಕಾರಣವಾಗಿದೆ.

ಮಾನವೀಯತೆ ಮತ್ತು ಸೇವಾಭಾವವು ನ್ಯಾಯಮೂರ್ತಿ ಶಿವರಾಜ ಪಾಟೀಲರ ವ್ಯಕ್ತಿತ್ವದ ಮತ್ತೊಂದು ಪ್ರಮುಖ ಅಂಶವಾಗಿದೆ. ಅವರು ಸಮಾಜದ ಸಮಸ್ಯೆಗಳನ್ನು ಆಳವಾಗಿ ಅರ್ಥಮಾಡಿಕೊಂಡು, ಅವುಗಳ ಪರಿಹಾರಕ್ಕಾಗಿ ತಮ್ಮ ಕೊಡುಗೆಯನ್ನು ನೀಡಿದ್ದಾರೆ. ಸಮಾಜದ ಎಲ್ಲ ವರ್ಗದ ಜನರ ಕಲ್ಯಾಣಕ್ಕಾಗಿ ಅವರು ಸದಾ ತೊಡಗಿಸಿಕೊಂಡಿದ್ದರು. ಈ ಸೇವಾಭಾವವು ಅವರನ್ನು ಕೇವಲ ನ್ಯಾಯಮೂರ್ತಿಯಷ್ಟೇ ಅಲ್ಲದೆ, ಸಮಾಜದ ಮಾರ್ಗದರ್ಶಕರನ್ನಾಗಿ ಮಾಡಿತು.

ಶರಣ ಸಂಸ್ಕೃತಿಯ ಪ್ರಭಾವವೂ ಅವರ ವ್ಯಕ್ತಿತ್ವದಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ. ಬಸವಣ್ಣನ ತತ್ವಗಳನ್ನು ಅನುಸರಿಸಿ, ಅವರು ಜೀವನದಲ್ಲಿ ನೈತಿಕತೆ, ಸಮಾನತೆ ಮತ್ತು ಸೇವೆಯನ್ನು ಅಳವಡಿಸಿಕೊಂಡಿದ್ದರು. ಅವರ ಜೀವನವು ಶರಣ ಪರಂಪರೆಯ ಮೌಲ್ಯಗಳನ್ನು ಪ್ರತಿಬಿಂಬಿಸುತ್ತದೆ. ನ್ಯಾಯಮೂರ್ತಿ ಶಿವರಾಜ ಪಾಟೀಲರ ವ್ಯಕ್ತಿತ್ವವು ಮೌಲ್ಯಾಧಾರಿತ ಜೀವನದ ಒಂದು ಅತ್ಯುತ್ತಮ ಮಾದರಿಯಾಗಿದೆ. ಅವರ ಜೀವನವು ನಮಗೆ ಸರಳತೆ, ನೈತಿಕತೆ, ಶಿಸ್ತು ಮತ್ತು ಸೇವೆಯ ಮಹತ್ವವನ್ನು ತಿಳಿಸುತ್ತದೆ. ಇಂದಿನ ಸಮಾಜದಲ್ಲಿ ಇಂತಹ ವ್ಯಕ್ತಿತ್ವಗಳು ಅಪರೂಪವಾಗಿದ್ದು, ಅವರ ಜೀವನವು ಮುಂದಿನ ತಲೆಮಾರುಗಳಿಗೆ ಪ್ರೇರಣೆಯಾಗಿ ಉಳಿಯುತ್ತದೆ.

ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲರನ್ನು "ಶರಣರ ಪ್ರತಿರೂಪ" ಎಂದು ಕರೆದರೆ ತಪ್ಪಾಗಲಾರದು. ಶರಣರು ತಮ್ಮ ಜೀವನದಲ್ಲಿ ನೈತಿಕತೆ, ಸತ್ಯನಿಷ್ಠೆ, ಸಮಾನತೆ ಮತ್ತು ಸೇವಾಭಾವವನ್ನು ಹೇಗೆ ಅಳವಡಿಸಿಕೊಂಡಿದ್ದರೋ, ಅದೇ ರೀತಿ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲರೂ ತಮ್ಮ ಜೀವನದಲ್ಲಿ ಈ ಮೌಲ್ಯಗಳನ್ನು ಅನುಸರಿಸಿದ್ದಾರೆ. ಅವರ ನಡೆ-ನುಡಿ, ಮಾತು ಮತ್ತು ಕಾರ್ಯಗಳ ನಡುವಿನ ಸಮನ್ವಯವು ಅವರನ್ನು ಕೇವಲ ನ್ಯಾಯಮೂರ್ತಿಯಲ್ಲದೆ, ಒಂದು ಜೀವಂತ ಆದರ್ಶವನ್ನಾಗಿ ಮಾಡಿದೆ. ಅವರ ಜೀವನವನ್ನು ವಿಶ್ಲೇಷಿಸಿದಾಗ, ನ್ಯಾಯ, ಸತ್ಯ, ಶಿಸ್ತು ಮತ್ತು ಸೇವೆ ಎಂಬ ನಾಲ್ಕು ಪ್ರಮುಖ ತತ್ವಗಳ ಮೇಲೆ ಅದು ನಿರ್ಮಿತವಾಗಿರುವುದು ಸ್ಪಷ್ಟವಾಗುತ್ತದೆ. ನ್ಯಾಯದ ವಿಷಯದಲ್ಲಿ ಅವರು ತೋರಿದ ನಿಷ್ಠೆ, ಸತ್ಯದ ಪರ ನಿಲ್ಲುವ ಧೈರ್ಯ, ಶಿಸ್ತಿನ ಜೀವನಶೈಲಿ ಮತ್ತು ಸಮಾಜಸೇವೆಯತ್ತ ಅವರ ತೀವ್ರ ಆಸಕ್ತಿ-ಇವುಗಳ ಸಮನ್ವಯವೇ ಅವರ ವ್ಯಕ್ತಿತ್ವದ ಮಹತ್ವವನ್ನು ಹೆಚ್ಚಿಸಿದೆ. ಈ ಗುಣಗಳು ಅವರನ್ನು ಸಮಕಾಲೀನ ಸಮಾಜದಲ್ಲಿ ಮಾರ್ಗದರ್ಶಕ ವ್ಯಕ್ತಿಯಾಗಿ ಗುರುತಿಸಿವೆ.

ಇಂದಿನ ವೇಗವಾಗಿ ಬದಲಾಗುತ್ತಿರುವ ಸಮಾಜದಲ್ಲಿ ನೈತಿಕ ಮೌಲ್ಯಗಳು ಕುಗ್ಗುತ್ತಿರುವ ಸಂದರ್ಭದಲ್ಲಿ, ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲರ ಜೀವನವು ಆದರ್ಶಮಯವಾಗಿದೆ. ಅವರ ಜೀವನವು ಕೇವಲ ಒಂದು ವ್ಯಕ್ತಿಯ ಸಾಧನೆಗಳ ಕಥೆಯಲ್ಲ; ಅದು ಒಂದು ಮೌಲ್ಯಾಧಾರಿತ ಜೀವನದ ಮಾದರಿಯಾಗಿದೆ. ಯುವಜನತೆಗೆ ಮತ್ತು ಭವಿಷ್ಯದ ನಾಯಕರಿಗೆ ಅವರ ಜೀವನವು ದಿಕ್ಕು ತೋರಿಸುವ ದೀಪಸ್ತಂಭವಾಗಿದೆ.

ನ್ಯಾಯಮೂರ್ತಿ ಶಿವರಾಜ ಪಾಟೀಲರ ಸಮಾಜಸೇವೆ ಮತ್ತು ನಾಯಕತ್ವ :

ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನ್ಯಾಯಾಂಗವು ಅತ್ಯಂತ ಪ್ರಮುಖವಾದ ಮತ್ತು ವಿಶ್ವಾಸಾರ್ಹವಾದ ಸ್ತಂಭವಾಗಿದೆ. ಸಂವಿಧಾನದ ಮೂಲ ತತ್ವಗಳನ್ನು ಕಾಪಾಡುವ, ನಾಗರಿಕರ ಹಕ್ಕುಗಳನ್ನು ರಕ್ಷಿಸುವ ಹಾಗೂ ಆಡಳಿತ ವ್ಯವಸ್ಥೆಯನ್ನು ನಿಯಂತ್ರಿಸುವ ಹೊಣೆಗಾರಿಕೆಯನ್ನು ನ್ಯಾಯಾಂಗ ವಹಿಸಿಕೊಂಡಿದೆ. ಇಂತಹ ಮಹತ್ವದ ವ್ಯವಸ್ಥೆಯನ್ನು ಬಲಪಡಿಸಲು ಅನೇಕ ಗಣ್ಯ ನ್ಯಾಯಮೂರ್ತಿಗಳು ತಮ್ಮ ಬುದ್ಧಿಶಕ್ತಿ, ನೈತಿಕತೆ ಮತ್ತು ಸಮರ್ಪಣೆಯಿಂದ ಅಮೂಲ್ಯ ಸೇವೆ ಸಲ್ಲಿಸಿದ್ದಾರೆ. ಈ ಮಹನೀಯರ ಸಾಲಿನಲ್ಲಿ ಶಿವರಾಜ ವಿ. ಪಾಟೀಲ್ ಅವರು ಅತ್ಯಂತ ಗೌರವಾನ್ವಿತ ಸ್ಥಾನವನ್ನು ಪಡೆದಿದ್ದಾರೆ.

ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ ಅವರ ಸಮಾಜಸೇವೆ ಮತ್ತು ನಾಯಕತ್ವವು ಅವರ ವ್ಯಕ್ತಿತ್ವದ ಮೂಲಭೂತ ಅಂಶಗಳಾಗಿವೆ. ಅವರ ಜೀವನವು ಕೇವಲ ನ್ಯಾಯಾಂಗ ಸೇವೆಗೆ ಮಾತ್ರ ಸೀಮಿತವಾಗಿರದೆ, ಸಮಗ್ರ ಸಮಾಜದ ಹಿತಾಸಕ್ತಿಯನ್ನು ಒಳಗೊಂಡಿರುವ ಮೌಲ್ಯಾಧಾರಿತ ಕಾರ್ಯಚಟುವಟಿಕೆಗಳ ಸಮನ್ವಯವಾಗಿದೆ. ಅವರ ಸಮಾಜಮುಖಿ ಚಿಂತನೆ, ನೈತಿಕತೆ ಮತ್ತು ಶರಣ ಪರಂಪರೆಯ ಮೌಲ್ಯಗಳನ್ನು ಅನುಸರಿಸಿದ ಮಹಾನ್ ಚೇತನರಾಗಿದ್ದಾರೆ. ನ್ಯಾಯಮೂರ್ತಿ ಪಾಟೀಲರ ಸಮಾಜಸೇವೆ ವ್ಯಾಪಕ ಮತ್ತು ಬಹುಮುಖವಾಗಿದೆ. ಅವರು ಅನೇಕ ಸಾಮಾಜಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಸ್ಥೆಗಳ ಮೂಲಕ ಸಮಾಜದ ವಿವಿಧ ವರ್ಗಗಳ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ವಿಶೇಷವಾಗಿ, ಅವರ ಹೆಸರಿನಲ್ಲಿ ಸ್ಥಾಪಿತವಾದ ವಿವಿಧ ಸಂಸ್ಥೆಗಳು ಸಮಾಜದ ಒಳಿತಿಗಾಗಿ ನಿರಂತರವಾಗಿ ಕಾರ್ಯನಿರ್ವಹಿಸುತ್ತಿವೆ. ಈ ಸಂಸ್ಥೆಗಳ ಮೂಲಕ ಅವರು ಶಿಕ್ಷಣದ ಪ್ರೋತ್ಸಾಹ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಹಾಯ, ಬಡವರ ನೆರವು, ಉಚಿತ ವೈದ್ಯಕೀಯ ಸೇವೆಗಳು ಮತ್ತು ಮಾನವೀಯ ಸೇವೆಗಳನ್ನು ಒದಗಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ.

ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ ಅವರ ಸಮಾಜಸೇವೆ ಕೇವಲ ವೈಯಕ್ತಿಕ ಮಟ್ಟದಲ್ಲಷ್ಟೇ ಸೀಮಿತವಾಗಿರದೆ, ಅವರ ಸ್ಮರಣಾರ್ಥವಾಗಿ ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಹಾಗೂ ತಮಿಳುನಾಡಿನ ಮದುರೈಯಲ್ಲಿ ಅನೇಕ ಸಂಸ್ಥೆಗಳು ಸ್ಥಾಪಿತವಾಗಿದ್ದು, ಅವುಗಳು ನಿರಂತರವಾಗಿ ಸಾಮಾಜಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವೆಗಳನ್ನು ನಿರ್ವಹಿಸುತ್ತಿವೆ. ಅವರ ಹೆಸರಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಮುಖ ಸಂಸ್ಥೆಗಳು ಹೀಗಿವೆ:

- ಜಸ್ಟಿಸ್ ಶಿವರಾಜ ಪಾಟೀಲ್ ಪದವಿ ಪೂರ್ವ ವಿಜ್ಞಾನ ಮಹಾವಿದ್ಯಾಲಯ, ಕಲಬುರ್ಗಿ
- ನ್ಯಾಯಮೂರ್ತಿ ಡಾ. ಶಿವರಾಜ ಪಾಟೀಲ್ ಸಾಂಸ್ಕೃತಿಕ ಭವನ, ಕಲಬುರ್ಗಿ
- ಜಸ್ಟಿಸ್ ಶಿವರಾಜ ಪಾಟೀಲ್ ಪದವಿ ಪೂರ್ವ ವಿಜ್ಞಾನ ಮಹಾವಿದ್ಯಾಲಯ, ರಾಯಚೂರು
- ನ್ಯಾಯಮೂರ್ತಿ ಶಿವರಾಜ ಪಾಟೀಲ್ ಪ್ರತಿಷ್ಠಾನ, ರಾಯಚೂರು

- Justice Shivaraj Patil Foundation, Madurai (Tamil Nadu)
- Justice Shivaraj Patil Moot Court Hall, Chembur Kannada Sangha Law College, Mumbai
- Justice Shivaraj Patil Academy for Democratic Values, Madurai

ಈ ಸಂಸ್ಥೆಗಳು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದು, ಅವರ ಸಮಾಜಮುಖಿ ಚಿಂತನೆಯ ಜೀವಂತ ಪ್ರತಿರೂಪಗಳಾಗಿವೆ.

ಶಿಕ್ಷಣ ಕ್ಷೇತ್ರದಲ್ಲಿ ಅವರ ಕೊಡುಗೆ ವಿಶಿಷ್ಟವಾಗಿದೆ. ಅವರು ಶಿಕ್ಷಣವನ್ನು ಕೇವಲ ಜ್ಞಾನಾರ್ಜನೆಯ ಸಾಧನವಾಗಿ ಮಾತ್ರವಲ್ಲದೆ, ವ್ಯಕ್ತಿತ್ವ ನಿರ್ಮಾಣದ ಮತ್ತು ಸಮಾಜ ಪರಿವರ್ತನೆಯ ಪ್ರಮುಖ ಮಾರ್ಗವಾಗಿ ಪರಿಗಣಿಸಿದ್ದಾರೆ. ಅವರು ವಿವಿಧ ಶಿಕ್ಷಣ ಸಂಸ್ಥೆಗಳೊಂದಿಗೆ ನಿಕಟವಾಗಿ ಸಂಬಂಧ ಹೊಂದಿ, ಯುವಜನತೆಗೆ ನೈತಿಕ ಮೌಲ್ಯಗಳನ್ನು ಬೋಧಿಸಿ, ಅವರಲ್ಲಿ ಜವಾಬ್ದಾರಿತನ ಮತ್ತು ಸಾಮಾಜಿಕ ಅರಿವು ಮೂಡಿಸಲು ಪ್ರಯತ್ನಿಸಿದ್ದಾರೆ. ಅವರ ಉಪನ್ಯಾಸಗಳು ಮತ್ತು ಮಾರ್ಗದರ್ಶನವು ಯುವಕರಲ್ಲಿ ಪ್ರೇರಣೆಯನ್ನು ಉಂಟುಮಾಡುವಲ್ಲಿ ಮಹತ್ವದ ಪಾತ್ರವಹಿಸಿವೆ.

ಸಮಾಜದ ಸಮಸ್ಯೆಗಳ ಕುರಿತು ಅವರು ತೋರಿದ ಕಾಳಜಿಯು ಅವರ ನಾಯಕತ್ವದ ಮತ್ತೊಂದು ಪ್ರಮುಖ ಮುಖವಾಗಿದೆ. ಬಾಲ್ಯವಿವಾಹದಂತಹ ಸಾಮಾಜಿಕ ಸಮಸ್ಯೆಗಳನ್ನು ನಿರ್ಮೂಲನೆಗೊಳಿಸಲು ಅವರು ಕೈಗೊಂಡ ಪ್ರಯತ್ನಗಳು ಅಷ್ಟಿಷ್ಟಲ್ಲ. ಈ ಮೂಲಕ ಅವರು ಕೇವಲ ನ್ಯಾಯಾಂಗದ ದೃಷ್ಟಿಯಿಂದ ಮಾತ್ರವಲ್ಲದೆ, ಸಾಮಾಜಿಕ ಜವಾಬ್ದಾರಿಯ ದೃಷ್ಟಿಯಿಂದಲೂ ಸಮಸ್ಯೆಗಳನ್ನು ಎದುರಿಸಿದ ನಾಯಕನಾಗಿ ಕಾಣಿಸಿಕೊಂಡಿದ್ದಾರೆ.

ನ್ಯಾಯಮೂರ್ತಿ ಪಾಟೀಲರ ನಾಯಕತ್ವವು ಮೌಲ್ಯಾಧಾರಿತ ನಾಯಕತ್ವದ ಅತ್ಯುತ್ತಮ ಉದಾಹರಣೆಯಾಗಿದೆ. ಅವರು ನಾಯಕತ್ವವನ್ನು ಅಧಿಕಾರದ ಸಾಧನವಾಗಿ ಪರಿಗಣಿಸದೆ, ಸೇವೆಯ ಮಾರ್ಗವಾಗಿ ಬಳಸಿದರು. "ಅಧಿಕಾರವು ಅವರ ವ್ಯಕ್ತಿತ್ವವನ್ನು ಬದಲಿಸಲಿಲ್ಲ; ಅವರ ವ್ಯಕ್ತಿತ್ವವೇ ಅಧಿಕಾರಕ್ಕೆ ಗೌರವ ತಂದಿತು" ಎಂದು ಹೇಳಿದರೆ ತಪ್ಪಾಗಲಾರದು. ಅವರ ನಾಯಕತ್ವದಲ್ಲಿ ಪ್ರಾಮಾಣಿಕತೆ, ಪಾರದರ್ಶಕತೆ, ನೈತಿಕತೆ ಮತ್ತು ಸೇವಾಭಾವ ಪ್ರಮುಖ ಪಾತ್ರವಹಿಸುತ್ತವೆ. ಅವರು ತಮ್ಮ ನಡೆ–ನುಡಿ ಮತ್ತು ಕಾರ್ಯಗಳ ಮೂಲಕ ಇತರರಿಗೆ ಮಾದರಿಯಾಗಿದ್ದು, ಮೌಲ್ಯಾಧಾರಿತ ಜೀವನದ ಮಹತ್ವವನ್ನು ತೋರಿಸಿದ್ದಾರೆ.

ಶರಣ ಸಂಸ್ಕೃತಿಯ ಪ್ರಭಾವವು ಅವರ ಸಮಾಜಸೇವೆ ಮತ್ತು ನಾಯಕತ್ವದಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ. ಬಸವಣ್ಣನ ತತ್ವಗಳಾದ ಸಮಾನತೆ, ಸೇವಾಭಾವ ಮತ್ತು ಶ್ರಮದ ಮಹತ್ವವನ್ನು ಅವರು ತಮ್ಮ ಜೀವನದಲ್ಲಿ ಅನುಸರಿಸಿದ್ದಾರೆ. ಅವರು ಶರಣರಂತೆ ಜೀವನ ನಡೆಸಿದ ವ್ಯಕ್ತಿ. ಈ ಕಾರಣದಿಂದಾಗಿ ಅವರ ನಾಯಕತ್ವವು ಕೇವಲ ಕಾರ್ಯಪರವಾಗಿಯೇ ಸೀಮಿತವಾಗಿರದೆ, ತತ್ವಾಧಾರಿತವಾಗಿದೆ.

ನ್ಯಾಯಮೂರ್ತಿ ಪಾಟೀಲರ ನಾಯಕತ್ವದಲ್ಲಿ ಮಾನವೀಯತೆ ಮತ್ತು ನ್ಯಾಯದ ಸಮನ್ವಯವೂ ಗಮನಾರ್ಹವಾಗಿದೆ. ಅವರು ಕಾನೂನಿನ ಮರ್ಯಾದೆಯನ್ನು ಕಾಪಾಡಿಕೊಂಡು, ಮಾನವೀಯತೆಯನ್ನು ಮರೆಯದ ನಾಯಕನಾಗಿದ್ದರು. ಅವರ ಮಾತು– "A Judge Can Bend the Law to Do Justice, But Can't Break the Law"– ಅವರ ನ್ಯಾಯತತ್ತ್ವದಷ್ಟೇ ಅಲ್ಲದೆ, ಅವರ ನಾಯಕತ್ವದ ಮೂಲ ತತ್ವವನ್ನೂ ಪ್ರತಿಬಿಂಬಿಸುತ್ತದೆ.

ಅವರ ನಾಯಕತ್ವವು ಸಮಾಜದ ವಿವಿಧ ವರ್ಗಗಳ ನಡುವೆ ಸಮನ್ವಯವನ್ನು ಸಾಧಿಸುವಲ್ಲಿ ಸಹಾಯಕವಾಗಿದೆ. ಶಿಕ್ಷಕರು, ವಿದ್ಯಾರ್ಥಿಗಳು, ನ್ಯಾಯಾಧೀಶರು, ಅಧಿಕಾರಿಗಳು ಮತ್ತು ಸಾಮಾನ್ಯ ಜನ–ಎಲ್ಲರೊಂದಿಗೆ ಸಮಾನವಾಗಿ ಸಂಪರ್ಕ ಹೊಂದಿ, ಅವರು ಸಮಾಜದ ಏಕತೆಯನ್ನು ಬಲಪಡಿಸಿದ್ದಾರೆ. ಈ ಗುಣವು ಅವರನ್ನು ಸಮಗ್ರ ನಾಯಕನನ್ನಾಗಿ ರೂಪಿಸಿದೆ.

ನ್ಯಾಯಮೂರ್ತಿ ಶಿವರಾಜ ಪಾಟೀಲರ ಸಮಾಜಸೇವೆ ಮತ್ತು ನಾಯಕತ್ವವು ಮೌಲ್ಯಾಧಾರಿತ ಜೀವನದ ಶ್ರೇಷ್ಠ ಮಾದರಿಯಾಗಿದೆ. ಅವರ ಜೀವನವು ನಾಯಕತ್ವದ ನಿಜವಾದ ಅರ್ಥವನ್ನು ನಮಗೆ ತಿಳಿಸುತ್ತದೆ–ಅದು ಸೇವೆ, ನೈತಿಕತೆ ಮತ್ತು ಸಮಾನತೆಯ ಆಧಾರದ ಮೇಲೆ ನಿರ್ಮಿತವಾಗಿರಬೇಕು. ಇಂದಿನ ಸಮಾಜದಲ್ಲಿ ಇಂತಹ ನಾಯಕತ್ವ ಅತ್ಯಂತ ಅಗತ್ಯವಾಗಿದ್ದು, ಅವರ ಜೀವನವು ಭವಿಷ್ಯದ ನಾಯಕರುಗಳಿಗೆ ದಿಕ್ಕು ತೋರಿಸುವ ದಾರಿದೀಪವಾಗಿದೆ.

**ನ್ಯಾಯಮೂರ್ತಿ ಶಿವರಾಜ ಪಾಟೀಲರ ನ್ಯಾಯತತ್ತ್ವ :**

ನ್ಯಾಯಮೂರ್ತಿ ಶಿವರಾಜ ಪಾಟೀಲ ಅವರ ನ್ಯಾಯತತ್ತ್ವವು ಕೇವಲ ಕಾನೂನು ಪ್ರಕ್ರಿಯೆಗಳ ಕಟ್ಟುನಿಟ್ಟಿನ ಪಾಲನೆಯಷ್ಟೇ ಅಲ್ಲದೆ, ಮಾನವೀಯತೆ, ನೈತಿಕತೆ ಮತ್ತು ನ್ಯಾಯದ ಮೂಲಭೂತ ತತ್ವಗಳ ಸಮನ್ವಯವಾಗಿರುವ ಸಮಗ್ರ ದಾರ್ಶನಿಕ ದೃಷ್ಟಿಕೋನವಾಗಿದೆ. ಅವರ ಚಿಂತನೆಗಳಲ್ಲಿ ಕಾನೂನು ಮತ್ತು ನ್ಯಾಯ ಇವುಗಳ ನಡುವಿನ ಸೂಕ್ಷ್ಮ ಹಾಗೂ ಸಮತೋಲನಿತ ಸಂಬಂಧವು ಸ್ಪಷ್ಟವಾಗಿ ಗೋಚರಿಸುತ್ತದೆ. ಅವರ ನ್ಯಾಯತತ್ತ್ವವು ಮಾನವ ಘನತೆ, ನೈತಿಕ ಮೌಲ್ಯಗಳು ಮತ್ತು ಸಾಮಾಜಿಕ ನ್ಯಾಯದ ಆಧಾರಗಳ ಮೇಲೆ ನಿರ್ಮಿತವಾಗಿರುವುದು ಸ್ಪಷ್ಟವಾಗುತ್ತದೆ. ನ್ಯಾಯಮೂರ್ತಿ ಪಾಟೀಲರ ದೃಷ್ಟಿಯಲ್ಲಿ, ಕಾನೂನು ಮತ್ತು ನ್ಯಾಯವು ಪರಸ್ಪರ ಅವಿಭಾಜ್ಯವಾಗಿದ್ದರೂ, ಅವುಗಳನ್ನು ಯಾಂತ್ರಿಕವಾಗಿ ಬಳಸದೇ, ವಿವೇಕಪೂರ್ಣವಾಗಿ ಮತ್ತು ಸಂದರ್ಭಾನುಸಾರವಾಗಿ ಅನ್ವಯಿಸುವುದು ನ್ಯಾಯಮೂರ್ತಿಯ ಪ್ರಮುಖ ಕರ್ತವ್ಯವಾಗಿದೆ. ಅವರೇ ಹೇಳುವಂತೆ "A Judge Can Bend the Law to Do Justice, But Cannot Break the Law" ಎನ್ನುವ ಮಾತು ಅವರ ನ್ಯಾಯತತ್ತ್ವದ ಸಾರವನ್ನು ಸ್ಪಷ್ಟವಾಗಿ ವ್ಯಕ್ತಪಡಿಸುತ್ತದೆ. ಈ ಮಾತಿನ ಅರ್ಥ, ನ್ಯಾಯವನ್ನು ಸಾಧಿಸಲು ಕಾನೂನನ್ನು ಸೂಕ್ತವಾಗಿ ವ್ಯಾಖ್ಯಾನಿಸಬಹುದಾದರೂ, ಕಾನೂನಿನ ಮೂಲ ಸಿದ್ಧಾಂತಗಳನ್ನು ಉಲ್ಲಂಘಿಸಲು ಅವಕಾಶವಿಲ್ಲ ಎಂಬುದಾಗಿದೆ. ಇದು ಅವರ ಮೌಲ್ಯಾಧಾರಿತ ಮತ್ತು ನಿಯಮಾನುಸಾರವಾದ ಸಮತೋಲನದ ದೃಷ್ಟಿಕೋನವನ್ನು ತೋರಿಸುತ್ತದೆ.

ನ್ಯಾಯಮೂರ್ತಿ ಪಾಟೀಲರ ನ್ಯಾಯತತ್ತ್ವದಲ್ಲಿ ಮಾನವ ಘನತೆ (Human Dignity) ಕೇಂದ್ರ ಸ್ಥಾನವನ್ನು ಹೊಂದಿದೆ. ಅವರ ಚಿಂತನೆಯ ಪ್ರಕಾರ, ಮಾನವ ಘನತೆ ಮಾನವ ಹಕ್ಕುಗಳ ಮೂಲ ಆಧಾರವಾಗಿದ್ದು, ಎಲ್ಲಾ ನ್ಯಾಯತೀರ್ಪುಗಳು ಮತ್ತು ಕಾನೂನು ಪ್ರಕ್ರಿಯೆಗಳು ಈ ತತ್ವವನ್ನು ಕಾಪಾಡುವ ದಿಕ್ಕಿನಲ್ಲಿ ಇರಬೇಕು. ಅವರು ಮಾನವ ಹಕ್ಕುಗಳನ್ನು ಕೇವಲ ಕಾನೂನಿನ ವಿಧಿಗಳು ಎಂದು ಪರಿಗಣಿಸದೇ, ಅವುಗಳನ್ನು ಮಾನವೀಯ ಮೌಲ್ಯಗಳ ಪ್ರತಿಫಲವಾಗಿ ನೋಡಿದರು. ಈ ಹಿನ್ನೆಲೆಯಲ್ಲಿ, ಕೈದಿಗಳ ಹಕ್ಕುಗಳು, ಮಹಿಳೆಯರ ಹಕ್ಕುಗಳು ಹಾಗೂ ಸಮಾಜದ ದುರ್ಬಲ ವರ್ಗಗಳ ಹಕ್ಕುಗಳಿಗೆ ಅವರು ವಿಶೇಷ ಆದ್ಯತೆ ನೀಡಿದರು. ಅವರ ದೃಷ್ಟಿಯಲ್ಲಿ ನ್ಯಾಯವು ಕೇವಲ ತಾಂತ್ರಿಕ ಅಥವಾ ಪ್ರಕ್ರಿಯಾತ್ಮಕ ಫಲಿತಾಂಶವಲ್ಲ, ಅದು ನೈತಿಕತೆಯ ಮೇಲೆ ಆಧಾರಿತವಾಗಿರಬೇಕು. ಸತ್ಯನಿಷ್ಠೆ, ಪ್ರಾಮಾಣಿಕತೆ ಮತ್ತು ಪಾರದರ್ಶಕತೆ ಎಂಬ ಮೌಲ್ಯಗಳು ನ್ಯಾಯಮೂರ್ತಿಯ ವ್ಯಕ್ತಿತ್ವದಲ್ಲಿ ಅವಿಭಾಜ್ಯವಾಗಿ

ಅಡಕವಾಗಿರಬೇಕು ಎಂದು ಅವರು ನಂಬಿದರು. ಈ ನೈತಿಕ ದೃಷ್ಟಿಕೋನವೇ ಅವರ ನ್ಯಾಯತತ್ತ್ವವನ್ನು ಇತರರಿಂದ ವಿಭಿನ್ನಗೊಳಿಸುತ್ತದೆ.

ನ್ಯಾಯಮೂರ್ತಿ ಪಾಟೀಲರ ನ್ಯಾಯತತ್ತ್ವದಲ್ಲಿ ಸಾಮಾಜಿಕ ನ್ಯಾಯ (Social Justice) ಮಹತ್ವದ ಸ್ಥಾನವನ್ನು ಹೊಂದಿದೆ. ಅವರು ನ್ಯಾಯವನ್ನು ಕೇವಲ ವ್ಯಕ್ತಿಗತ ಹಕ್ಕುಗಳ ರಕ್ಷಣೆಗಾಗಿ ಮಾತ್ರವಲ್ಲದೆ, ಸಮಗ್ರ ಸಮಾಜದ ಸಮಾನತೆ ಮತ್ತು ನ್ಯಾಯಕ್ಕಾಗಿ ಬಳಸಬೇಕೆಂದು ನಂಬಿದರು. ಸಮಾಜದ ದುರ್ಬಲ ಮತ್ತು ಹಿಂದುಳಿದ ವರ್ಗಗಳಿಗೆ ನ್ಯಾಯ ಸಿಗುವಂತೆ ಮಾಡುವಲ್ಲಿ ಅವರು ತಮ್ಮ ದೃಷ್ಟಿಕೋನವನ್ನು ಕೇಂದ್ರೀಕರಿಸಿದರು. ಈ ಮೂಲಕ ಅವರ ನ್ಯಾಯತತ್ತ್ವವು ಸಮಾಜಮುಖಿ ಸ್ವರೂಪವನ್ನು ಪಡೆದುಕೊಂಡಿದೆ.

ಅವರ ನ್ಯಾಯತತ್ತ್ವದ ಮೇಲೆ ಶಿವಶರಣರ ತತ್ವಗಳ ಪ್ರಭಾವವೂ ಸ್ಪಷ್ಟವಾಗಿ ಕಾಣುತ್ತದೆ. “ನಡೆ–ನುಡಿ ಒಂದಾಗಿರಬೇಕು” ಎಂಬ ತತ್ವವು ಅವರ ನ್ಯಾಯತತ್ತ್ವದಲ್ಲಿಯೂ ಪ್ರತಿಬಿಂಬಿಸುತ್ತದೆ. ನ್ಯಾಯಮೂರ್ತಿಯ ನಡೆ–ನುಡಿ ಮತ್ತು ತೀರ್ಪುಗಳು ಒಂದೇ ಮೌಲ್ಯಾಧಾರಿತ ದಿಕ್ಕಿನಲ್ಲಿ ಇರಬೇಕು ಎಂಬುದು ಅವರ ನಿಲುವಾಗಿತ್ತು. ಸಮಾನತೆ, ಸೇವಾಭಾವ ಮತ್ತು ನೈತಿಕತೆ ಎಂಬ ಶರಣ ತತ್ವಗಳು ಅವರ ನ್ಯಾಯತತ್ತ್ವವನ್ನು ಮತ್ತಷ್ಟು ಗಂಭೀರಗೊಳಿಸುತ್ತವೆ. ನ್ಯಾಯಮೂರ್ತಿಯ ಕರ್ತವ್ಯವನ್ನು ಅವರು ಬಹುಮುಖವಾಗಿ ನೋಡಿದರು. ಅವರ ಪ್ರಕಾರ, ನ್ಯಾಯಮೂರ್ತಿ ಕೇವಲ ಕಾನೂನು ತಜ್ಞನಲ್ಲ, ಸಮಾಜದ ಮಾರ್ಗದರ್ಶಕನೂ ಆಗಿರಬೇಕು. ಕಾನೂನಿನ ಪಾಲನೆ, ನ್ಯಾಯದ ಸ್ಥಾಪನೆ ಮತ್ತು ಮಾನವೀಯತೆಯ ಕಾಪಾಡುವಿಕೆ–ಈ ಮೂರು ಅಂಶಗಳ ಸಮನ್ವಯವೇ ನ್ಯಾಯಮೂರ್ತಿಯ ನಿಜವಾದ ಪಾತ್ರವೆಂದು ಅವರು ಅಭಿಪ್ರಾಯಪಟ್ಟರು. ಇದಲ್ಲದೆ, ಅವರು ನ್ಯಾಯಾಂಗದಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಗೆ ವಿಶೇಷ ಮಹತ್ವ ನೀಡಿದರು. ನ್ಯಾಯ ಪ್ರಕ್ರಿಯೆಗಳು ಸ್ಪಷ್ಟವಾಗಿರಬೇಕು ಮತ್ತು ಸಾರ್ವಜನಿಕ ವಿಶ್ವಾಸವನ್ನು ಕಾಪಾಡುವ ರೀತಿಯಲ್ಲಿ ನಡೆಯಬೇಕು ಎಂಬುದು ಅವರ ನಿಲುವಾಗಿತ್ತು. ನ್ಯಾಯಾಂಗದ ಮೇಲಿನ ಜನರ ನಂಬಿಕೆ ಉಳಿಯುವುದೇ ಪ್ರಜಾಪ್ರಭುತ್ವದ ಬಲವಾದ ಆಧಾರ ಎಂದು ಅವರು ನಂಬಿದರು.

ನ್ಯಾಯಮೂರ್ತಿ ಶಿವರಾಜ ಪಾಟೀಲರ ಸಾಹಿತ್ಯಕ ಸೇವೆ:– ನ್ಯಾಯಮೂರ್ತಿ ಡಾ. ಶಿವರಾಜ ವಿ. ಪಾಟೀಲ ಅವರು ನ್ಯಾಯಾಂಗ ಕ್ಷೇತ್ರದ ಜೊತೆಗೆ ಸಾಹಿತ್ಯ ಲೋಕದಲ್ಲಿಯೂ ವಿಶಿಷ್ಟ ಸಾಧನೆಗೈದ ಮಹತ್ವದ ಚಿಂತಕ–ಲೇಖಕರಾಗಿದ್ದಾರೆ. ಅವರು ತಮ್ಮ ನ್ಯಾಯಾಂಗ ಸೇವೆಯ ನಡುವೆಯೇ ಅನೇಕ ಮಹತ್ವದ ಕೃತಿಗಳನ್ನು ರಚಿಸಿದ್ದು, ಅದು ಅವರ ಬೌದ್ಧಿಕ ಸಾಮರ್ಥ್ಯ ಮತ್ತು ಸಮಾಜಮುಖಿ ಚಿಂತನೆಯ ಆಳವನ್ನು ಸ್ಪಷ್ಟಪಡಿಸುತ್ತದೆ. ಅವರ ಸಾಹಿತ್ಯವು ಕೇವಲ ಬರಹಗಳ ಸಂಕಲನವಾಗಿರದೆ, ಜೀವನದ ಮೌಲ್ಯಗಳು, ನೈತಿಕತೆ ಮತ್ತು ಮಾನವೀಯತೆಯ ಸಂದೇಶವನ್ನು ಸಾರುವ ದಾರಿದೀಪವಾಗಿದೆ. ಅವರ ಪ್ರಮುಖ ಕೃತಿಗಳು ಹೀಗಿವೆ:

- ಶ್ರೀ ಶರಣ ಬಸವೇಶ್ವರ ಚರಿತ್ರೆ
- ಶಿಕ್ಷಣದ ಮಹತ್ವ
- ಸಾರ್ಥಕ ಬದುಕು
- ಮಾನವ ಹಕ್ಕುಗಳು – ಭಾರತದ ಸಂವಿಧಾನ ಮತ್ತು ವಿಶ್ವವಿದ್ಯಾಲಯಗಳು
- ವಿನಯಶೀಲತೆ, ಮಾನವೀಯತೆ ಮತ್ತು ಮಾನವ ಹಕ್ಕುಗಳು
- ಅನುಭವದ ನುಡಿಗಳು (ಭಾಗ–1 ಮತ್ತು 2)

- ಮುಂಜಾವಿಗೊಂದು ನುಡಿ ಕಿರಣ (ಉರ್ದು, ಹಿಂದಿ ಮತ್ತು ತಮಿಳು ಭಾಷೆಗಳಿಗೆ ಅನುವಾದವಾಗಿದೆ.)
- ಕಳೆದ ಕಾಲ ನಡೆದ ದೂರ (ಆತ್ಮಕಥನ)
- ಸಂಜೆಗೊಂದು ನುಡಿ ಚಿಂತನ
- ಸಾಧ್ವಿ ಶಿರೋಮಣಿ ಹೇಮರೆಡ್ಡಿ ಮಲ್ಲಮ್ಮ
- ಶಿವ ನುಡಿಗಳು
- ಮಾನವ ಘನತೆಯ ಪರವಾದ ಮಾನವ ಹಕ್ಕುಗಳ ಚಿಂತನೆಗಳು
- Humility, Humanity and Human Rights
- Justice Shivaraj Patil on Human Rights
- Words of Wisdom (Part–1 & 2)
- Good Morning – 365
- Good Evening – 365
- Time Spent Distance Travelled (Autobiography)
- Speaking for Humanity
- ಶುಭರಾತ್ರಿಗೊಂದು ನುಡಿ ಮಥನ
- Good Night – 365

ನ್ಯಾಯಮೂರ್ತಿ ಶಿವರಾಜ ಪಾಟೀಲ ಅವರ ಕುರಿತು ಸಹೃದಯ ಬಳಗವೂ ಅನೇಕ ಕೃತಿಗಳನ್ನು ರಚಿಸಿ, ಅನುವಾದಿಸಿ, ಸಂಪಾದಿಸಿ ಪ್ರಕಟಿಸಿರುವುದು ಗಮನಾರ್ಹವಾಗಿದೆ. ಅವು ಇಂತಿವೆ :

- ಕಾಯಕ ರತ್ನ (ಬಸವಶ್ರೀ ಪ್ರಶಸ್ತಿ – ಸಾಂದರ್ಭಿಕ ಸ್ಮರಣ ಸಂಪುಟ)
- ಶಿವ ಕೃಪೆ (ಜೀವನ ಚರಿತ್ರೆ)
- ಶರಣ ಪಥ (ಅಭಿನಂದನ ಗ್ರಂಥ)
- ವಚನ ಶಿವ (ವಚನಗಳ ಸಂಗ್ರಹ)
- ನ್ಯಾಯಮೂರ್ತಿ ಶಿವರಾಜ ಪಾಟೀಲ (ಸಂಕ್ಷಿಪ್ತ ಜೀವನ ಚರಿತೆ)
- ನ್ಯಾಯಮೂರ್ತಿ ಡಾ. ಶಿವರಾಜ ವಿ. ಪಾಟೀಲ (ಜೀವನ ಚರಿತ್ರೆ)
- ಕಾಯಕ ಶಿವ (ಕವಿತೆಗಳ ಸಂಗ್ರಹ)
- ಸಾರ್ಥಕ ಬದುಕು ಸಂ. 1 ಮತ್ತು 2. (ಅಭಿನಂದನ ಗ್ರಂಥ)
- ಸುಪ್ರೀಂ ಸೋಲ್ (ಸಂದರ್ಶನಗಳ ಸಂಗ್ರಹ)
- Divine Grace (Biography)
- Justice Shivaraj V. Patil – A Fine Blend of Justice and Humility (Biography)
- ಚಕ್ಕಡಿಯಿಂದ ತಕ್ಕಡಿಗೆ

**ಶ್ರೀಯುತರಿಗೆ ಸಂದ ಪುರಸ್ಕಾರಗಳು:**

ನ್ಯಾಯಮೂರ್ತಿ ಡಾ. ಶಿವರಾಜ ವಿ. ಪಾಟೀಲ ಅವರ ಜೀವನ ಸಾಧನೆಗಳು ಕೇವಲ ನ್ಯಾಯಾಂಗ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿರದೆ, ಸಮಾಜ, ಶಿಕ್ಷಣ ಮತ್ತು ಮಾನವೀಯ ಮೌಲ್ಯಗಳ ಕ್ಷೇತ್ರಗಳಲ್ಲಿಯೂ ವಿಶಾಲವಾಗಿ ವ್ಯಾಪಿಸಿರುವುದರಿಂದ, ಅನೇಕ ವಿಶ್ವವಿದ್ಯಾಲಯಗಳು ಮತ್ತು ಶೈಕ್ಷಣಿಕ ಸಂಸ್ಥೆಗಳು ನ್ಯಾಯಮೂರ್ತಿ ಡಾ. ಶಿವರಾಜ ವಿ. ಪಾಟೀಲ ಅವರ

ಜೀವಿತಾವಧಿಯ ಅಪೂರ್ವ ಸಾಧನೆ ಯನ್ನು ಮನಗಂಡು ಅವರಿಗೆ ಉನ್ನತ ಗೌರವಗಳನ್ನು ನೀಡಿ ಸನ್ಮಾನಿಸಿವೆ. ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗೆ ನೀಡಿದ ಅವರ ಕೊಡುಗೆಯನ್ನು ಗುರುತಿಸಿ, ಕನ್ನಡ ವಿಶ್ವವಿದ್ಯಾಲಯ ಹಂಪಿ 'ನಾಡೋಜ' ಎಂಬ ಗೌರವ ಪದವಿಯನ್ನು ನೀಡಿ ಸನ್ಮಾನಿಸಿದೆ.

ಈ ಐದು ವಿಶ್ವವಿದ್ಯಾಲಯಗಳು ಶ್ರೀಯುತರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಪುರಸ್ಕರಿಸಿವೆ:

- ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ
- ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ
- ಶರಣಬಸವ ವಿಶ್ವವಿದ್ಯಾಲಯ, ಕಲಬುರಗಿ
- ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ
- ಐ.ಎಸ್.ಎಚ್. (ಐ.ಐ.ಎಸ್) ವಿಶ್ವವಿದ್ಯಾಲಯ, ಜೈಪುರ, ರಾಜಸ್ಥಾನ

ಹಂಪಿಯ ಕನ್ನಡ ವಿಶ್ವವಿದ್ಯಾಲಯವು ಶ್ರೀಯುತರಿಗೆ ಪ್ರತಿಷ್ಠಿತ 'ನಾಡೋಜ' ಹೆಸರಿನ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿರುವುದು ಶ್ಲಾಘನೀಯವಾಗಿದೆ.

ನ್ಯಾಯಮೂರ್ತಿ ಶಿವರಾಜ ಪಾಟೀಲ ಅವರ ಬದುಕು ಒಂದು ಮುಕ್ತ ಗ್ರಂಥದಂತಿದೆ. ಅವರ ಜೀವನಯಾನವು 'ಚಕ್ಕಡಿಯಿಂದ ತಕ್ಕಡಿ' ವರೆಗೆ (ಗ್ರಾಮೀಣ ಸರಳ ಬದುಕಿನಿಂದ ಉನ್ನತ ನ್ಯಾಯಾಂಗ ಹುದ್ದೆಯವರೆಗೆ) ಸಾಗಿದ ಅದ್ಭುತ ಪಥವಾಗಿದೆ. ಈ ಪಯಣವು ಕೇವಲ ವೈಯಕ್ತಿಕ ಸಾಧನೆಯ ಕಥೆಯಲ್ಲ, ಯುವಪೀಳಿಗೆಗೆ ದಾರಿದೀಪವಾಗಿರುವ ಪ್ರೇರಣಾದಾಯಕ ಮಾದರಿಯಾಗಿದೆ. ಅವರ ಜೀವನವನ್ನು ವಿಶ್ಲೇಷಿಸಿದಾಗ, ಅದು ಕೇವಲ ವ್ಯಕ್ತಿಯ ಸಾಧನೆಯಷ್ಟೇ ಅಲ್ಲದೆ, ಮೌಲ್ಯಾಧಾರಿತ ಬದುಕಿನ ಸಜೀವ ಉದಾಹರಣೆಯಾಗಿ ಕಾಣಿಸುತ್ತದೆ. ಸತ್ಯನಿಷ್ಠೆ, ಶ್ರಮ, ಶಿಸ್ತು, ನೈತಿಕತೆ ಮತ್ತು ಸೇವಾಭಾವ ಇಂತಹ ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಅವರು ಉನ್ನತ ಮಟ್ಟದ ಸಾಧನೆಯನ್ನು ಮಾಡಿದ್ದಾರೆ. ಈ ಅಂಶಗಳು ಅವರ ವ್ಯಕ್ತಿತ್ವವನ್ನು ವಿಶಿಷ್ಟವಾಗಿಸುತ್ತವೆ. ನ್ಯಾಯಮೂರ್ತಿ ಶಿವರಾಜ ಪಾಟೀಲರ ಜೀವನವು ಮೌಲ್ಯಾಧಾರಿತ ಸಾಧನೆಯ ಪಥವಾಗಿದ್ದು, ಅವರ ಸಾಹಿತ್ಯವು ಸಮಾಜಮುಖಿ ಚಿಂತನೆಯ ಬೆಳಕಾಗಿದೆ. ಅವರು ಬರೆದ ಕೃತಿಗಳು ಕೇವಲ ಸಾಹಿತ್ಯ ಸೃಷ್ಟಿಯಲ್ಲ, ಜೀವನವನ್ನು ರೂಪಿಸುವ ಮಾರ್ಗದರ್ಶಕ ತತ್ವಗಳ ಸಂಕಲನವಾಗಿವೆ. ಅವರ ಸಾಹಿತ್ಯದಲ್ಲಿ ವ್ಯಕ್ತವಾಗಿರುವ ಮಾನವೀಯತೆ, ನ್ಯಾಯತತ್ತ್ವ ಮತ್ತು ನೈತಿಕ ಮೌಲ್ಯಗಳು ಇಂದಿನ ಸಮಾಜಕ್ಕೂ ಅತ್ಯಂತ ಪ್ರಾಸಂಗಿಕವಾಗಿವೆ.

**ಆಕರ ಗ್ರಂಥಗಳು:**

1. ಅಮರೇಶ ಯತಗಲ್ ಮತ್ತು ಡಾ. ಚನ್ನಬಸವ ಹಿರೇಮಠ (ಸಂ.), (2007), ಶರಣ ಪಥ (ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲರ ಅಭಿನಂದನ ಗ್ರಂಥ).
2. ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ, (2024), ಕಳೆದ ಕಾಲ ನಡೆದ ದೂರ (ಆತ್ಮಕಥನ), ಬೆಂಗಳೂರು: ಸ್ಪರ್ಶ್ ಫೌಂಡೇಶನ್.
3. ಕಲ್ಯಾಣರಾವ ಜಿ. ಪಾಟೀಲ (ಸಂ.), (2026), ಗಂಧವ್ರತ: ಪ್ರಬುದ್ಧಪಥ, ರಾಯಚೂರು: ನ್ಯಾಯಮೂರ್ತಿ ಶಿವರಾಜ ಪಾಟೀಲ್ ಪ್ರತಿಷ್ಠಾನ.